**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ**

**ದಿನಾಂಕಃ 07.04.2026**

**ಸಿ.ಸಿ.ಸಂ.11/2024**

ಫಿರ್ಯಾದುದಾರರುಃ ಬಸವರಾಜು ರವರ ಪೌತಿ ವಾರಸುದಾರರು,

1. ಶ್ರೀಮತಿ.ಪ್ರೇಮ ಕೋಂಃ ಲೇಃ ಬಸವರಾಜು,
   ಸುಮಾರು 51 ವರ್ಷ,
   ವಾಸಃ ಬಸ್ತಿಹಳ್ಳಿ ಗ್ರಾಮ, ಚಿನಕುರಳಿ ಹೋಬಳಿ,
   ಪಾಂಡವಪುರ ತಾಲ್ಲೂಕು.

2. ಪಲ್ಲವಿ.ಬಿ ಬಿನ್ ಲೇಃ ಬಸವರಾಜು ಕೋಂಃ ಪ್ರಕಾಶ,
   ಸುಮಾರು 33 ವರ್ಷ,
   ವಾಸಃ ಇಗ್ಗಲೂರು ಗ್ರಾಮ, ವಿರೂಪಾಕ್ಷಿಪುರ
   ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

3. ಬಿ.ನಂದಿನಿ ಬಿನ್ ಲೇಃ ಬಸವರಾಜು ಕೋಂಃ ಮಹೇಶ್
   ಕುಮಾರ್ , ಸುಮಾರು 31 ವರ್ಷ,
   ವಾಸಃ ತಾಳಶಾಸನ ಗ್ರಾಮ, ಕಸಬಾ ಹೋಬಳಿ,
   ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

4. ರಂಜಿತ.ಬಿ ಬಿನ್ ಲೇಃ ಬಸವರಾಜು ಕೋಂಃ ಗುರುಮಲ್ಲೇಶ,
   ಸುಮಾರು 29 ವರ್ಷ,
   ವಾಸಃ ಮಲ್ಲೇನಹಳ್ಳಿ ಗ್ರಾಮ, ದುದ್ದ ಹೋಬಳಿ,
   ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ.

ಃ ವಿರುದ್ಧ ಃ

ಆರೋಪಿಃ ಸಂದೀಪ್ ನಾಯ್ಕ ಬಿನ್ ಲಕ್ಷ್ಮಣನಾಯ್ಕ,
ಸುಮಾರು 36 ವರ್ಷ,
ವಾಸಃ ಬೊಮ್ಮನಗದ್ದೆ, ಕುಮಟಾ, ಬಾಸೊಳ್ಳಿ
ಸಂತೆಗುಳಿ, ಉತ್ತರ ಕನ್ನಡ.
ಹಾಲಿ ವಾಸಃ ಸಂದೀಪ್ ನಾಯ್ಕ ರೈಲ್ವೆ ನೌಕರ,
ರೈಲ್ವೆ ಕ್ವಾಟ್ರಸ್, ಮಂಡ್ಯ.

## ಆರೋಪಣೆ

**ಶ್ರೀಮತಿ. ಪಾರ್ವತಮ್ಮ.ಬಿ., ಬಿ.ಎ., ಎಲ್.ಎಲ್.ಎಂ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

## ದಂಡ ಪ್ರಕ್ರಿಯಾ ಸಂಹಿತೆ ಕಲಂಃ 251 ರ ಅಡಿಯಲ್ಲಿನ ಆರೋಪ

ಆರೋಪಿಯಾದ ನೀವು ಪಿರ್ಯಾದುದಾರರ ಕಡೆಯಿಂದ, ದಿನಾಂಕಃ 26.07.2023 ರಂದು ರೂ.10,00,000/- ಗಳನ್ನು ಹಣವನ್ನು ಸಾಲವಾಗಿ ಪಡೆದಿದ್ದು, ಇದನ್ನು ತಿರುವಳಿ ಮಾಡುವ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ(00865) ಶಾಖೆಗೆ ಸೇರಿದ, ರೂ.10,00,000/-ಗಳ ಚೆಕ್ ನಂಃ 193307 ರ ದಿನಾಂಕಃ 26.01.2023 ರಂದು ಫಿರ್ಯಾದುದಾರರಿಗೆ ಕೊಟ್ಟಿದ್ದು, ಸದರಿ ಚೆಕ್ ನಲ್ಲಿನ ಹಣವನ್ನು ಪಡೆಯುವ ಬಗ್ಗೆ ಫಿರ್ಯಾದುದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಾಂಡವಪುರ ಶಾಖೆಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ "Funds insufficient" ಎನ್ನುವ ಕಾರಣದಿಂದ ಸದರಿ ಚೆಕ್ ಅಮಾನ್ಯಗೊಂಡಿದ್ದು, ತದನಂತರ 30 ದಿನಗಳ ಒಳಗಾಗಿ ಪಿರ್ಯಾದುದಾರರು ಆರೋಪಿಯಾದ ನೀಮಗೆ ದಿನಾಂಕ: 03.11.2023 ರಂದು ನೋಟೀಸ್ ಗಳನ್ನು ನೀಡಿದ್ದು, ಹಾಲಿ ವಾಸಕ್ಕೆ ಕಳುಹಿಸಿದ್ದ ನೋಟಿಸ್ ದಿನಾಂಕಃ 06.11.2023 ರಂದು unclaimed ಎಂಬ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ ಹಾಗೂ ಆರೋಪಿಯ ಗ್ರಾಮಕ್ಕೆ ಕಳುಹಿಸಿರುವ ನೋಟೀಸ್ "ಸದರಿ ವಿಳಾಸದಾರರಿಗೆ ತಿಳಿಸಲಾಗಿ ವಾಯಿದೆಯೊಳಗೆ ಬರದಿದ್ದ ಕಾರಣ ವಾಸಪ್ ಕಳುಹಿಸಿದೆ" ಎಂಬ ಷರಾದೊಂದಿಗೆ ದಿನಾಂಕಃ 13.11.2023 ರಂದು ವಾಪಸ್ ಮಾಡಿರುತ್ತಾರೆ. ಆರೋಪಿಯಾದ ನೀವು ಪಿರ್ಯಾದುದಾರರ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ-138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ: **1** ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ **?**
ಉತ್ತರಃ

ಪ್ರಶ್ನೆ: **2**ಃ ಈಗ ನೀವು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ **?**

ಉತ್ತರಃ

**(**ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು**.)**

**(ಪಾರ್ವತಮ್ಮ.ಬಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ಆರೋಪಿ ಸಹಿಃ